15884 ಮು.ಉ SL.NO:-32 ದಿ:-12-03-26

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ:ಬಿ.ಜಿ.ಪಾಟೀಲ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ.**

**ವಿಷಯ:-** **ಪ್ರಜಾವಾಣಿ ದಿನ ಪತ್ರಿಕೆಯಲ್ಲಿ ಪ್ರಕಟವಾದ "ಹಿನ್ನೀರ ಭೂಸಂತ್ರಸ್ತರಿಗೆ ಪರಿಹಾರ ಮರೀಚಿಕೆ" ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನಲ್ಲಿ ಬರುವ ಸನ್ನತ್ತಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣದಿಂದ ಹಿನ್ನೀರಿನಲ್ಲಿ ಭೂಮಿ ಕಳೆದುಕೊಂಡ ರೈತರಿಗೆ ಪರಿಹಾರ ನೀಡುವಂತೆ ಕಲಬುರಗಿಯ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ 2023 ರಲ್ಲಿ ಆದೇಶ ಮಾಡಿದರೂ ಇದುವರೆಗೂ ಪರಿಹಾರ ನೀಡಿರುವುದಿಲ್ಲ. ಸನ್ನತಿ, ಕನಗನಹಳ್ಳಿ, ತರಕಸ್ಪೇಟ್ ಗ್ರಾಮಗಳ ಒಟ್ಟು 5 ಭೂಸ್ವಾಧೀನ ಪ್ರಕರಣಗಳಿಗೆ ಬಾಕಿ ರೂ.2.78 (ಎರಡು ಕೋಟಿ ಎಪ್ಪತ್ತೆಂಟು ಲಕ್ಷ) ಭೂಸಂತ್ರಸ್ತ ರೈತರಿಗೆ ಪಾವತಿಸಲು ಜಿಲ್ಲಾಡಳಿತ ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ಸೂಚಿಸಿದರು ಪರಿಹಾರ ಮಾತ್ರ ಕೈ ಸೇರಿಲ್ಲ ಎಂದು ಸಂತ್ರಸ್ತ ರೈತರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.**

**ಆದ ಕಾರಣ ಸರ್ಕಾರ ಕೂಡಲೇ ಹಿನ್ನೀರ ಭೂಸಂತ್ರಸ್ತರಿಗೆ ಬಾಕಿ ನೀಡಬೇಕಾಗಿರುವ ಪರಿಹಾರದ ಹಣವನ್ನು ಬಿಡುಗಡೆ ಮಾಡುವಂತೆ ಮಾನ್ಯ ಸಚಿವರನ್ನು ಶೂನ್ಯ ವೇಳೆಯಲ್ಲಿ ಆಗ್ರಹಿಸುತ್ತೇನೆ.**

**ಉತ್ತರ:**

ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನಲ್ಲಿ ಬರುವ ಸನ್ನತ್ತಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣದಿಂದ ಹಿನ್ನೀರಿನಲ್ಲಿ ಭೂಮಿ ಕಳೆದುಕೊಂಡ ರೈತರಿಗೆ ಪರಿಹಾರ ನೀಡುವ ಸಂಬಂಧದ ಪ್ರಸ್ತಾಪಿತ ಪ್ರಕರಣದ ಬಿಲ್ಲುಗಳ ಕುರಿತಂತೆ ವಿವರಗಳು ಈ ಕೆಳಕಂಡಂತಿವೆ:

| | | |
|---|---|---|
| 1 | ವಿಶೇಷ ಭೂಸ್ವಾಧಿನಾಧಿಕಾರಿಗಳ ಆದೇಶದಂತೆ ಈಗಾಗಲೆ ಪಾವತಿಸಲಾಗಿರುವ ಪರಿಹಾರ ಧನ ಮೊತ್ತ | ರೂ.1,04,37,669.00/- |
| 2 | ಮಾನ್ಯ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಆದೇಶದಂತೆ ಪಾವತಿಸಬೇಕಾಗಿರುವ ಬಾಕಿ ಮೊತ್ತ | ರೂ.2,78,03,881.00/- |

ಕಲಬುರಗಿಯ ಮಾನ್ಯ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಆದೇಶಿಸಿರುವ ಹೆಚ್ಚುವರಿ ಪರಿಹಾರವು ಒಪ್ಪಂದದ ದರಕ್ಕಿಂತ ಹೆಚ್ಚುವರಿ ಯಾಗಿರುವುದರಿಂದ, ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೃಮೇಯೋ, ಭೀಮರಾಯನಗುಡಿ ರವರು ಸದರಿ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯ, ಕರಬುರಗಿ ಪೀಠದಲ್ಲಿ ಅಪೀಲ್ ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯದ ಅಂತಿಮ ಆದೇಶದಂತೆ ಮುಂದಿನ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

(ಸಂಖ್ಯೆ:ಜಸಂಇ 38 ಡಬ್ಲ್ಯೂಬಿಎಂ 2026)

**(ಡಿ.ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿಗಳು**